# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1332 |
| ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 29.12.2022. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಯವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2000ನೇ ಸಾಲಿನಿಂದ ತಹಶೀಲ್ದಾರ್, ಕ್ಷೇತ್ರಾಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ವತಿಯಿಂದ ನಿವೇಶನ ರಹಿತರಿಗೆ ಹಕ್ಕುಪತ್ರ ಕಳೆದುಕೊಂಡಿದ್ದಲ್ಲಿ, ಇ-ಸ್ವತ್ತು (9 ಮತ್ತು 11 ನಮೂನೆ) ನೀಡಲಾಗುತ್ತಿದೆಯೇ; | ಇಲ್ಲ. |
| (ಆ) | ಹಕ್ಕುಪತ್ರ ಕಳೆದುಕೊಂಡ ಫಲಾನುಭವಿಗಳಿಗೆ 9 ಮತ್ತು 11 ನಮೂನೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಬಂದಿದೆ.<br><br>ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಆಸ್ತಿಯ ಮಾಲೀಕರ ಹೆಸರು ನಮೂದಾಗಿದ್ದಲ್ಲಿ ತೆರಿಗೆ ನಿರ್ಧರಣೆ ಪಟ್ಟಿ ಆಧಾರದ ಮೇಲೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-11ಬಿ ನೀಡಬಹುದು. ಆದರೆ ಮಾರಾಟಕ್ಕೆ ಅವಕಾಶವಿರುವುದಿಲ್ಲವೆಂದು ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |
| (ಇ) | ಹಕ್ಕುಪತ್ರದ ಆಧಾರದ ಮೇಲೆ ಫಲಾನುಭವಿಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಮಾಡಿರುವುದರಿಂದ ಇದರ ಆಧಾರ ಮೇಲೆಯೇ 9 ಮತ್ತು 11 ನಮೂನೆ ವಿತರಿಸಬಹುದಲ್ಲವೇ; ಇದಕ್ಕಿರುವ ತೊಡಕುಗಳೇನು; | ಮೂಲ ದಾಖಲೆಗಳು ಲಭ್ಯವಿಲ್ಲದ ಪ್ರಯುಕ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ವಿತರಿಸಲು ಅವಕಾಶವಿರುವುದಿಲ್ಲ. |
| (ಈ) | 2000ಕ್ಕಿಂತಲೂ ಹಿಂದೆ ಹಕ್ಕುಪತ್ರ ಪಡೆದು ಗ್ರಾಮ ಪಂಚಾಯಿತಿಗಳಲ್ಲಿ ಖಾತೆ ಮಾಡಿಸದಿರುವ ಫಲಾನುಭವಿಗಳಿಗೂ ಹಕ್ಕುಪತ್ರದ ಆಧಾರದ ಮೇಲೆ 9 ಮತ್ತು 11 ನಮೂನೆ ನೀಡಬಹುದಲ್ಲವೇ; ನೀಡದಿರಲು ಕಾರಣಗಳೇನು; | ವಿವಿಧ ವಸತಿ ಯೋಜನೆಯಡಿ ಮಂಜೂರಾತಿ ಆದೇಶ ಮತ್ತು ಹಕ್ಕು ಪತ್ರವನ್ನು ಆಸ್ತಿಯ ಮಾಲೀಕರಿಂದ ಪಡೆದು ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಡಿಜಿಟಲ್ ಸಹಿಯ ಮೂಲಕ ನಮೂನೆ-9 ಮತ್ತು 11 ನ್ನು ವಿತರಿಸಲು ಅವಕಾಶ ಕಲ್ಪಿಸಲಾಗಿದೆ. |
| (ಉ) | ಶಿವಮೊಗ್ಗ ಜಿಲ್ಲೆಗಳಲ್ಲಿ 2000ಕ್ಕಿಂತ ಹಿಂದಿನ ಸಾಲುಗಳಲ್ಲಿ ಹಕ್ಕುಪತ್ರ ಪಡೆದು ಕಳೆದುಕೊಂಡಿರುವ ಫಲಾನುಭವಿಗಳ ಪೈಕಿ ಎಷ್ಟು ಮಂದಿ 9 ಮತ್ತು 11 ನಮೂನೆ ನೀಡಲು ಕೋರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದಾರೆ; ಎಷ್ಟು ಮಂದಿಗೆ 9 ಮತ್ತು 11 ನಮೂನೆ ವಿತರಿಸಲಾಗಿದೆ ಮತ್ತು ವಿತರಿಸಲು ಬಾಕಿ ಇದೆ? (ತಾಲ್ಲೂಕುವಾರು ಮಾಹಿತಿ ನೀಡುವುದು) | ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಮಾತ್ರ ನಮೂನೆ-9 ಮತ್ತು 11ಎ ವಿತರಿಸಲು 450 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಮೂಲ ದಾಖಲೆಗಳು ಲಭ್ಯವಿಲ್ಲದ ಪ್ರಯುಕ್ತ ನಮೂನೆ-9 ಮತ್ತು 11ಎ ವಿತರಿಸಲು ಅವಕಾಶವಿರುವುದಿಲ್ಲ.<br><br>ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ಆಸ್ತಿಯ ಮಾಲೀಕರ ಹೆಸರು ನಮೂದಾಗಿದ್ದಲ್ಲಿ ತೆರಿಗೆ ನಿರ್ಧರಣೆ ಪಟ್ಟಿ ಆಧಾರದ ಮೇಲೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-11ಬಿ ನೀಡಲು ಅವಕಾಶ ಕಲ್ಪಿಸಲಾಗಿದೆ. |

ಸಂ. ಗ್ರಾಅಪ 393 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ